# ನೀವು ಕೇಳಿದಿರಿ?

ಬಿ.ಎಂ. ಸುಬ್ಬಣ್ಣ, ಬೆಂಗಳೂರು

ಇಷ್ಟೊಂದು ವಿಮಾನ ಸಂಚಾರವಿದ್ದರೂ ಸಂಚಾರಿ ನಾರದರೇಕೆ ಕಾಣುತ್ತಿಲ್ಲ?



ಕಂಡರೆ ಹೈಜಾಕ್ ಮಾಡಿಯಾರೆಂದು ಮೋಡದ ಮರೆಯಲ್ಲೇ ಸಂಚರಿಸುವರಂತೆ.

ರಾಜೇಂದ್ರ ಹೆಗಡೆ, ಹಾವೇರಿ

ಪ್ರಶ್ನೆ ಕೇಳುವವರು ಬೆಂಕಿಯಂತೆ, ಉತ್ತರಿಸುವವರು ಗಾಳಿಯಂತೆ ಎಂದು ವೃಶ್ಚಿಕಾ ಹೇಳಿದ್ದರು. ನೀವೇನೆನ್ನುವಿರಿ ರಾಮ್?

ಪ್ರಶ್ನೆ ಕೇಳುವವರು ಗುರುಗಳು; ಉತ್ತರಿಸುವವನು ಕಾಯಂ ವಿದ್ಯಾರ್ಥಿ.

ಮಲ್ಲಿಕಾರ್ಜುನ, ಸುರಧೇನುಪುರ

ಜಾಣರಿಗೆ ಜಗಳವಿಲ್ಲ. ವಕೀಲರಿಗೆ?

ಅಂತಹ ಜಾಣರ ಸಹವಾಸವಿಲ್ಲ.

ಮಂಡಿ ಕುಮಾರ್, ಬೆಂಗಳೂರು

ಹೆಣ್ಣನ್ನು ಸೇಬಿನ ಹಣ್ಣಿಗೆ ಹೋಲಿಸುವುದೇಕೆ?



ಅರೆಜೀವವಾದರೂ ಹೃದಯವಂತಿಕೆ ಬಿಡದಿರುವುದರಿಂದ (ಅರೆಸೇಬು ಹೃದಯಾಕಾರವಿರುತ್ತದಲ್ಲ!).

ವಿ. ಹೇಮಂತಕುಮಾರ್, ಬೆಂಗಳೂರು

ಭಾವನೆಗಳಿಗೆ ಬೆಲೆ ಕೊಡದವರ ಜೊತೆ ಬಾಂಧವ್ಯ ಬೇಕೆ?

ನೌಕರ–ಯಜಮಾನನ ಬಾಂಧವ್ಯ ಬೇಡ ಎನ್ನಲಾಗದಲ್ಲ!

ಆರ್. ಮಧುಸೂದನ್, ಹಾಸನ

ಗಾಳ ಹಾಕಿದರೂ, ಬಲೆ ಬೀಸಿದರೂ ಆ ಚೆಲುವೆ ಸಿಗುತ್ತಿಲ್ಲ. ಏನು ಮಾಡಲಿ?

ಗಾಳಿ ಹಾಕುವ, ಒಲೆ ಹೊತ್ತಿಸುವ ಕೆಲಸಕ್ಕೆ ಅರ್ಜಿ ಗುಜರಾಯಿಸಿ. ಶುಭಸ್ಯ ಶೀಘ್ರಂ.

ಲಕ್ಷ್ಮಣ್ ಗರ್ಲಕಟ್ಟೆ, ಮೈಸೂರು

ಕೃಷ್ಣನು ‘ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ’ ಎಂದನಲ್ಲ, ಆ ಧರ್ಮ ಯಾವುದು?

ಎಲ್ಲರೊಡನೆ ಸೇರಿಯೂ ಯಾರೊಡನೆಯೂ ಸೇರಿರದಂತಹ ಪರ್ಣೋಪರಿ ಜಲಬಿಂದು ಧರ್ಮ.

ಬೂಕನಕೆರೆ ವಿಜೇಂದ್ರ, ಮೈಸೂರು

ಧಾರಾವಾಹಿ ನೋಡುವ ಹೆಂಗಸರಿಗೂ, ಬಾರಲ್ಲಿ ಕುಡಿಯುವ ಗಂಡಸರಿಗೂ ವ್ಯತ್ಯಾಸವೇನು?

ಇದು ತೂಕವೇರಿಸುವ ಚಟ; ಅದು ಚಟ್ಟಕ್ಕೇರಿಸುವ ಚಟ.

ಕುಣಿಗಲ್ ಜಯಣ್ಣ, ಪಾಂಡವಪುರ

ನಂಬಿಕೆ ಎಂದರೆ ನಿಜವಾದ ಅರ್ಥ?

ದ್ರೋಹಿಗಳು ವಂಚಿಸುವುದಕ್ಕೆ ಮುನ್ನ ಬಳಸುವ ವಿಶ್ವಾಸವರ್ಧಕ ಅಸ್ತ್ರ.

ಜಗದೀಶ ಬಿ. ಹೊಸೂರು, ಮೈಸೂರು

ಹೆಣ್ಣಿಗೆ ಹಟ, ಗಂಡಿಗೆ ಚಟ ಎನ್ನುತ್ತಾರೆ. ಅದಲು ಬದಲಾದರೆ ಏನಾಗುತ್ತದೆ?

ದುರ್ಯೋಧನ, ಪರ್ವಿನ್ ಬಾಬಿಯರ ಜೀವನದಂತಾಗುತ್ತದೆ.

ಉಷಾ ಹೊಳ್ಳ, ಬೆಂಗಳೂರು

ಹೆಣ್ಣು, ಹೊನ್ನು, ಮಣ್ಣು; ಇವು ಋಣ ಇದ್ದರಷ್ಟೇ ಸಿಗುತ್ತವಂತೆ. ಹೌದಾ ರಾಮ್?

‘ಊಹೂಂ. ಶೇ. 85 ಋಣ ನೀಡಲು ಶೇ.15 ಸ್ವಯಾರ್ಜಿತವನ್ನು ತೋರಬೇಕು’ ಎಂದಿತು ಲೋನಿಂಗ್ ಕಂಪನಿ.

ಹೆಚ್.ವಿ. ಶ್ರೀಧರ್, ಬೆಂಗಳೂರು

ರಾಜಕಾರಣಿಗಳಲ್ಲಿ ಪ್ರತಿಶತ ಎಷ್ಟು ಜನ ಪ್ರಾಮಾಣಿಕರಿದ್ದಾರೆ?

ಅವರನ್ನು ಅಳೆಯಬೇಕಾದ್ದು ಪ್ರತಿಶತದಲ್ಲಿ ಅಲ್ಲ, ಪ್ರತಿ ಶತಮಾನದಲ್ಲಿ ಎಷ್ಟೆಂದು.

ಅನಸೂಯ ಟಿ, ಕೇದಿಗೆಮನೆ

ರಾಜಕಾರಣಿಗಳ ಮುಖವಾಡ ಕಳಚುವುದು ಹೇಗೆ?

ತೋಳ, ಊಸರವಳ್ಳಿ, ಗುಳ್ಳೆನರಿಗಳಿಗೆ ಮುಖವಾಡ ಇರುವುದಿಲ್ಲ.

## ಬಹುಮಾನಿತ ಪ್ರಶ್ನೆ

ಎಲ್.ಐ.ಸಿ. ನಾಗರಾಜ್, ಮೈಸೂರು

ದೀರ್ಘಸುಮಂಗಲೀ ಭವ ಎಂದು ಹರಸಿದರೆ ಪತಿಗಿಂತ ಮುಂಚೆ ಸಾಯಿ ಎಂದಂತಾಗಲಿಲ್ಲವೆ?

ಪತಿಯ ನಂತರವೂ ಶೂನ್ಯಸುಮಂಗಲಿಯಾಗಿ ಇರಬಹುದಲ್ಲ ನೆಗೆಟಿವ್ ನಾಗರಾಜರೆ!

ಸಿಹಿಮೊಗೆ ರಮೇಶ್, ಮೈಸೂರು

ಆತ್ಮಸಾಕ್ಷಿ ಎಂದರೇನು?

ಕಾನೂನಿನಿಂದ ನುಣುಚಿಕೊಂಡವನನ್ನೂ ಪ್ರಶ್ನಿಸಿ ಹಣ್ಣಾಗಿಸಬಲ್ಲ ಹಿಡನ್ ಕೋರ್ಟ್.

ಎಚ್.ಕೆ. ವಿಜಯಕುಮಾರ್, ರಾಯಚೂರು

ಬೆಂಗಳೂರಲ್ಲಿ ಕುಡಿಯಲು ನೀರಿಲ್ಲದಿದ್ದರೂ ಜನರು ಅಲ್ಲೇ ಹೋಗಿ ಇರುವವೆನ್ನುವುದೇಕೆ?

ಗಲ್ಲಿಗೊಂದು ಬಾರ್ ಇರುವುದರಿಂದ ಸೋಡಾ, ಬೀರ್ ಕುಡಿದೇ ಬದುಕಬಹುದೆಂದು.

ರಾಜೀವ್ ಮಾಗಲ್, ಸಕಲೇಶಪುರ

ಮೆದುಳಿನಲ್ಲಿ ಚಿಪ್ ಹಾಕಿದ ನಂತರ ಕೈಗೆ ಏನು ಕೊಡುತ್ತಾರೆ?



ಮಸ್ಕ್ ಮಸ್ಕಾದ (ಮಸುಕುಮಸುಕಾದ) ಭವಿಷ್ಯದ ಎಳೆಗಳನ್ನು.

ಗಂಜಾಂ ನಾಗರಾಜ್, ಮೈಸೂರು

ದೇವರ ದೇವ ಶಿವನ ಸಂಸಾರದಲ್ಲಿ ಸಹಜ ಯಾರೂ ಇಲ್ಲವೆ?

ಸಹಜವಿದ್ದರೆ ಅವರನ್ನು ದೇವರೆನ್ನಲಾಗದು. ವಿಶಿಷ್ಟತೆಯೇ ವಿಶ್ವರಕ್ಷಕರ ಸಹಜ ಗುಣ.

ಪಿ.ಜೆ. ರಾಘವೇಂದ್ರ, ಮೈಸೂರು

ಅವರಿಗೆ ಅಧಿಕಾರ ದಾಹ; ಇವರಿಗೆ ಅಧಿಕಾರ ಮದ. ಪ್ರಜೆಗಳ ಗತಿ?

ಹಾರಲೂ ಆಗದ, ಇರಲೂ ಆಗದ ತಲೆನೋವೆಂದು ಅಮೃತಾಂಜನದ ಡಬ್ಬಿಗೆ ಬಿದ್ದ ನೊಣದ ಪರಿಸ್ಥಿತಿ.

■ ರಾಮ್